ಜೇವರ್ಗಿ ಕ್ಷೇತ್ರದಲ್ಲಿ ಟ್ರಾನ್ಸ್‌ಫಾರ್ಮರ್ ಅಳವಡಿಸುವುದು

121 (424) ಶ್ರೀ ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ್ ನಾರಿಬೋಳ್ (ಜೇವರ್ಗಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜೇವರ್ಗಿ ಕ್ಷೇತ್ರದಲ್ಲಿ ಅಳವಡಿಸಿರುವ ಟ್ರಾನ್ಸ್ ಫಾರ್ಮರ್ (ಟಿ.ಸಿ)ಗಳು ಎಷ್ಟು? ಇದರಲ್ಲಿ ಎಷ್ಟು ಸಾಮರ್ಥ್ಯ (capacity) ಹೊಂದಿದೆ ಟ್ರಾನ್ಸ್ ಫಾರ್ಮರ್ (ಟಿ.ಸಿ.)ಗಳು ಎಲ್ಲೆಲ್ಲಿ ಅಳವಡಿಸಿದೆ (ವಿವರ ನೀಡುವುದು)?

ಆ) ಎಷ್ಟು ಟ್ರಾನ್ಸ್ ಫಾರ್ಮರ್ (ಟಿ.ಸಿ.)ಗಳು ಚಾಲನೆಯಲ್ಲಿವೆ? ಎಷ್ಟು ದುರಸ್ತಿಗೆ ಬಂದಿವೆ, ದುರಸ್ತಿಗೆ ಬಂದ ತಕ್ಷಣ ಕ್ರಮ ಕೈಗೊಳ್ಳಲಾಗಿದೆಯೇ?

ಇ) ಹೊಸ ಟ್ರಾನ್ಸ್ ಫಾರ್ಮರ್ (ಟಿ.ಸಿ.) ಗಳು ಜೇವರ್ಗಿ ಕ್ಷೇತ್ರದಲ್ಲಿ ಅಳವಡಿಸಲು ಗಮನಹರಿಸಿದೆಯೇ?

ಈ) ದುರಸ್ತಿಗೆ ಖರ್ಚಾದ ಹಣ ಎಷ್ಟು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಜೇವರ್ಗಿ ಕ್ಷೇತ್ರದಲ್ಲಿ ಅಳವಡಿಸಿರುವ ಪರಿವರ್ತಕಗಳ ವಿವರ ಈ ಕೆಳಗಿನಂತಿದೆ :–

ಕ್ರಮ ಸಂಖ್ಯೆ	ಸಾಮರ್ಥ್ಯ ಕೆ.ವಿ.ಎ	ಸಂಖ್ಯೆ
1	15	307
2	25	268
3	63	286
4	100	162
5	250	03
	ಒಟ್ಟು	**1026**

ಆ) ಜೇವರ್ಗಿ ಕ್ಷೇತ್ರದಲ್ಲಿ ಅಳವಡಿಸಿರುವ ಎಲ್ಲಾ ಪರಿವರ್ತಕಗಳು ಚಾಲನೆಯಲ್ಲಿವೆ ಮತ್ತು 225 ವಿಫಲವಾದ ಪರಿವರ್ತಕಗಳನ್ನು ದುರಸ್ತಿ ಮಾಡಿ ಮರು ಅಳವಡಿಸಲಾಗಿದೆ.

ಇ) ಜೇವರ್ಗಿ ಕ್ಷೇತ್ರದಲ್ಲಿ ಏಪ್ರಿಲ್–09 ರಿಂದ ಫೆಬ್ರವರಿ–10 ವರೆಗೆ ಹೊಸ ಪರಿವರ್ತಕಗಳು ಅಳವಡಿಸಲಾದ ಪರಿವರ್ತಕಗಳ ವಿವರ ಈ ಕೆಳಗಿನಂತಿದೆ :–

ಕ್ರಮ ಸಂಖ್ಯೆ	ಸಾಮರ್ಥ್ಯ ಕೆ.ವಿ.ಎ	ಸಂಖ್ಯೆ
1	25	26
2	63	40
3	100	01
4	250	01
	ಒಟ್ಟು	**49**

ಈ) ಜೇವರ್ಗಿ ಕ್ಷೇತ್ರದಲ್ಲಿ ಏಪ್ರಿಲ್–09 ರಿಂದ ಫೆಬ್ರವರಿ–10 ವರೆಗೆ ಪರಿವರ್ತಕಗಳ ದುರಸ್ತಿಗೆ ಖರ್ಚಾದ ಹಣ ರೂ. 28.06 ಲಕ್ಷಗಳು.

ರಾಜ್ಯದ ಹೊಸ ವಿಮಾನ ನಿಲ್ದಾಣಗಳ ಸ್ಥಾಪನೆ

131 (290) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ವಿಮಾನ ನಿಲ್ದಾಣಗಳನ್ನು ಸ್ಥಾಪಿಸಲಾಗುವುದು; ಇದಕ್ಕಾಗಿ ಇಲ್ಲಿಯವರೆವಿಗೆ ಸರ್ಕಾರ ಯಾವ ಯಾವ ಕಾಮಗಾರಿಗಳಿಗಾಗಿ ಎಷ್ಟು ಹಣವನ್ನು ವೆಚ್ಚ ಮಾಡಿದೆ (ನಿಲ್ದಾಣವಾರು ವಿವರಗಳನ್ನು ಒದಗಿಸುವುದು);

ಆ) ಬೀದರ್‌ನಲ್ಲಿ ವಿಮಾನ ನಿಲ್ದಾಣವನ್ನು ಪ್ರಾರಂಭಿಸುವ ಕೆಲಸ ಈಗ ಯಾವ ಹಂತದಲ್ಲಿದೆ;

ಇ) ರಾಜ್ಯದಲ್ಲಿ ಸ್ಥಾಪಿತಗೊಳ್ಳಲಿರುವ ವಿಮಾನ ನಿಲ್ದಾಣಗಳನ್ನು ನಿಗಧಿತ ಅವಧಿಯಲ್ಲಿ ಪ್ರಾರಂಭಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು;